**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.**

**ಸಿ.ಸಿ. ಸಂಖ್ಯೆ.287/2022**

| | | |
|---|---|---|
| ಸಾಕ್ಷಿದಾರರ ಹೆಸರು | : ಬಾಲಕೃಷ್ಣ | ಸಿ.ಡಬ್ಲ್ಯೂ: 2 ಪಿ.ಡಬ್ಲ್ಯೂ: 2 |
| ತಂದೆಯ ಹೆಸರು | : ರಾಜೇಗೌಡ | |
| ವಯಸ್ಸು | : 57 ವರ್ಷ | |
| ಉದ್ಯೋಗ | ನಾನು ದಿ:10.: ವ್ಯವಸಾಯ | |
| ವಾಸ ಸ್ಥಳ | : ಜನ್ನಾಪುರ | |

ದಿನಾಂಕ: 02.08.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:**

1. ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ಇರುತ್ತದೆ. ಅವರು ನಮ್ಮ ಊರಿನವರು ಆಗಿರುತ್ತಾರೆ. ಈಗ ನನಗೆ ತೋರಿಸಿದ ನಿ.ಪಿ.2 ರಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ಸದರಿ ಮಹಜರ್ ನ್ನು ದಿ: 16.01.2022 ರಂದು 11.00 ರಿಂದ 12.00 ಗಂಟೆ ವರೆಗೆ ಬರೆದಿರುತ್ತಾರೆ. ಮಹಜರ್ ಕಾಲದಲ್ಲಿ ಚಾಸಾ.3 ರವರು ಹಾಜರಿದ್ದರು. ಈಗ ನನಗೆ ತೋರಿಸಿದ ನಿ.ಪಿ.3 ಕರಡು ನಕ್ಷೆಯಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿ.ಪಿ.3(ಬಿ) ಎಂದು ಗುರುತಿಸಲಾಯಿತು. ನಿ.ಪಿ.4 ಛಾಯಚಿತ್ರದಲ್ಲಿ ನಾನು ಹಾಜರಿರುತ್ತೇನೆ. ಈಗ ನನಗೆ ತೋರಿಸಿದ ನೋಟೀಸಿನಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಸಾಕ್ಷಿಯು ನೋಟೀಸನ್ನು ನೋಡಿ ಗುರುತಿಸಿದ್ದು ನಿ.ಪಿ.7 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಪೊಲೀಸರು 250 ಕೆ.ಜಿ ಯಷ್ಟು ಅಡಿಕೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಾನು ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸ.ಸ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು ಸ.ಸ.ಅ. ರವರಿಂದ**

2. ಚಾಸಾ.1 ರವರ ತೋಟದಲ್ಲಿ ಅಡಿಕೆ ಕಳ್ಳತನ ಆಗಿರುವ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು ಶ್ರೀ ಕೆ.ಸಿ.ಸಿ ವಕೀಲರಿಂದ – 6 ಮತ್ತು 7 ನೇ ಆರೋಪಿತರ ಪರವಾಗಿ**

3. ಮಹಜರ್ ಗೆ ಬರುವಂತೆ ನನಗೆ ಮಹಜರ್ ದಿನವೇ ಪೊಲೀಸರು ನೋಟೀಸು ನೀಡಿರುತ್ತಾರೆ. ಸುಮಾರು 10 ಗಂಟೆಗೆ ನನಗೆ ಪೊಲೀಸರು ನೋಟೀಸನ್ನು ನೀಡಿರುತ್ತಾರೆ. ಪೊಲೀಸರು ನೋಟೀಸು ನೀಡುವ ಸಮಯದಲ್ಲಿ ನಾನು ತೋಟದಲ್ಲಿ ಇದ್ದೆನು ಎಂದು ಪೊಲೀಸರು ಮಾಡಿರುವ ಬರವಣಿಗೆಗೆ ನಾನು ಸಹಿ ಮಾಡಿರುತ್ತೇನೆ. ಚಾಸಾ.1 ರವರ ತೋಟಕ್ಕೆ ಹೋಗಬೇಕಾದರೆ ನನ್ನ ತೋಟದ ಮೂಲಕವೇ ಹಾದು ಹೋಗಬೇಕಾಗಿರುತ್ತದೆ. ನನ್ನ ತೋಟದಲ್ಲಿ ಕಾಫಿ, ಅಡಿಕೆ ಬೆಳೆಯನ್ನು ಬೆಳೆದಿರುತ್ತೇನೆ. ನನ್ನ ತೋಟದಲ್ಲಿ ಅಡಿಕೆ ಬಿದ್ದಿರುವ ಬಗ್ಗೆ ಮತ್ತು ಜನರು ಓಡಾಡಿರುವ ಹೆಜ್ಜೆಯ ಗುರಿತಿನ ಬಗ್ಗೆ ಪೊಲೀಸರು ಛಾಯಚಿತ್ರವನ್ನು ತೆಗೆದಿರುತ್ತಾರೆ. ಸಾಕ್ಷಿಯು ಮುಂದುವರೆದು ನನ್ನ ತೋಟದಲ್ಲಿ ನನ್ನನ್ನು ನಿಲ್ಲಿಸಿ ಪೊಲೀಸರು ಛಾಯಚಿತ್ರವನ್ನು ತೆಗೆದಿರುವುದಿಲ್ಲ. ಜನರ ಹೆಜ್ಜೆ ಗುರುತು ಮತ್ತು ಅಡಿಕೆ ಬಿದ್ದಿರುವ ಛಾಯಚಿತ್ರವನ್ನು ನಾನು ಈ ದಿನ ನ್ಯಾಯಾಲಯದಲ್ಲಿ ಗುರುತಿಸಿರುವುದಿಲ್ಲ. ನನ್ನ ತೋಟಕ್ಕೆ ಸುತ್ತಲು ಬೇಲಿ ಇರುತ್ತದೆ. ನನ್ನ ತೋಟದಲ್ಲಿ ಗಿಡದಿಂದ ಬೇಲಿಯನ್ನು ನಿರ್ಮಿಸಿರುತ್ತೇನೆ. ಸದರಿ ಗಿಡದಿಂದ ಮಾಡಿರುವ ಬೇಲಿಯಲ್ಲಿ ಯಾವುದೇ ವ್ಯಕ್ತಿಯು ನುಗ್ಗಿ ಹೋದರೆ ಸದರಿ ಬೇಲಿಯಲ್ಲಿ ಗುರುತು ಇರುತ್ತದೆ ಎಂದರೆ ಸರಿ. ನನ್ನ ತೋಟದ ಬೇಲಿಯಲ್ಲಿ ವ್ಯಕ್ತಿಗಳು ಹೋಗಿರುವ ಗುರುತು ಇತ್ತು. ಸದರಿ ಬೇಲಿಯ ಗುರುತು ಇರುವ ಬಗ್ಗೆ ಛಾಯಚಿತ್ರವನ್ನು ಪೊಲೀಸರು ತೆಗೆದಿರುವುದಿಲ್ಲ. ನನ್ನ ತೋಟದಲ್ಲಿ ಮತ್ತು ಚಾಸಾ.1 ರವರ ತೋಟದಲ್ಲಿ

ದ್ವಿಚಕ್ರ ವಾಹನಗಳು ಮತ್ತು ಆಟೋ ಓಡಾಡಿರುವ ಗುರುತು ಅವತ್ತು ಕಂಡು ಬಂದಿತ್ತು. ಸದರಿ ವಾಹನಗಳು ಓಡಾಡಿರುವ ಗುರುತು ಇರುವ ಛಾಯಚಿತ್ರವನ್ನು ಪೊಲೀಸರು ತೆಗೆದಿರುವುದಿಲ್ಲ. ನನ್ನ ತೋಟವು ಮುಖ್ಯ ರಸ್ತೆಯಿಂದ ಸಾದಾರಣ ತಗ್ಗು ಪ್ರದೇಶದಲ್ಲಿ ಇರುತ್ತದೆ. ಅಡಿಕೆಯನ್ನು ಇಟ್ಟು ನನ್ನನ್ನು ನಿಲ್ಲಿಸಿ ಪೊಲೀಸರು ಛಾಯಚಿತ್ರವನ್ನು ತೆಗೆದಿರುತ್ತಾರೆ. ಸದರಿ ಛಾಯಚಿತ್ರವನ್ನು ನಾನು ಈ ದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುವುದಿಲ್ಲ. ನನ್ನ ತೋಟದಲ್ಲಿ ಅಡಿಕೆ ಕಳ್ಳತನ ಆಗಿರುವ ಬಾಬ್ತು ಯಾವುದೇ ದೂರನ್ನು ನೀಡಿರುವುದಿಲ್ಲ. ಚಾಸಾ.1 ರವರ ತೋಟದ ಯಾವ ದಿಕ್ಕಿನಲ್ಲಿ ನನ್ನನ್ನು ನಿಲ್ಲಿಸಿ ಪೊಲೀಸರು ಛಾಯಚಿತ್ರವನ್ನು ತೆಗೆದಿರುತ್ತಾರೆ ಎಂದು ನನಗೆ ಹೇಳಲು ಸಾಧ್ಯವಿಲ್ಲ ಆದರೆ ನನ್ನ ತೋಟದ ಬಳಿ ನಿಲ್ಲಿಸಿ ಪೊಲೀಸರು ಛಾಯಚಿತ್ರವನ್ನು ತೆಗೆದಿರುತ್ತಾರೆ. ನಿ.ಪಿ.4 ಛಾಯಚಿತ್ರದಲ್ಲಿ ಅಡಿಕೆ ಬಿದ್ದಿರುವುದು ಅಡಿಕೆ ಚೀಲಗಳು ಇಟ್ಟಿರುವುದು ಕಂಡು ಬಂದಿರುವುದಿಲ್ಲ ಎಂದರೆ ಸರಿ. ಪೊಲೀಸರು ನನ್ನ ಸಮಕ್ಷಮ ಅಡಿಕೆಯನ್ನು ತೂಕ ಮಾಡಿರುವುದಿಲ್ಲ. ನನ್ನ ಸಹಿ ಇರುವ ಚೀಟಿಯನ್ನು ಪೊಲೀಸರು ಅಡಿಕೆ ಚೀಲಕ್ಕೆ ಅಂಟಿಸಿರುವುದಿಲ್ಲ. ನಾನು ಮತ್ತು ಚಾಸಾ.1 ರವರು ಆಜು ಬಾಜುದಾರರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ತಕ್ಷೀರು ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಳ್ಳತನ ಆಗಿರುವ ಅಡಿಕೆ ತೋಟದ ಒಳಗಡೆ ನನ್ನನ್ನು ನಿಲ್ಲಿಸಿ ಪೊಲೀಸರು ಛಾಯಚಿತ್ರವನ್ನು ತೆಗೆದಿರುತ್ತಾರೆ. ಸದರಿ ಛಾಯಚಿತ್ರವನ್ನು ನಾನು ಈ ದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ. ಛಾಯಚಿತ್ರವನ್ನು ಪೊಲೀಸರು ಮೊಬೈಲ್ ಮೂಲಕ ತೆಗೆದಿರುತ್ತಾರೆ. ಚಾಸಾ.1 ರವರಿಗೆ ಸರ್ವೆ ನಂಬರ್ 792 ರಲ್ಲಿ ಜಮೀನು

ಇರುತ್ತದೆ. ಸರ್ವೆ ನಂಬರ್ 792 ರಲ್ಲಿ ಅಡಿಕೆ ಕಳ್ಳತನ ಆಗಿರುವ ಬಗ್ಗೆ ಚಾಸಾ.1 ರವರು ದೂರು ನೀಡಿರುತ್ತಾರೆ. ಸಾಕ್ಷಿಯು ಮುಂದುವರೆದು ಕಳ್ಳತನ ಆಗಿರುವ ಆಸ್ತಿಯ ಸರ್ವೆ ನಂಬರ್ ನನಗೆ ನಿಖರವಾಗಿ ಹೇಳಲು ಸಾಧ್ಯವಿಲ್ಲ, ಆದರೆ ಚಾಸಾ.1 ರವರಿಗೆ ಸೇರಿದ ತೋಟದಲ್ಲಿ ಕಳ್ಳತನ ಆಗಿರುತ್ತದೆ ಎಂದು ನುಡಿಯುತ್ತಾರೆ. ಚಾಸಾ.1 ರವರು ಜಾಯ್ ಕಂಪನಿಯ ತಂಪು ಪಾನಿಯವನ್ನು ತಯಾರು ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ತಂಪು ಪಾನಿಯ ಸರಬರಾಜಿನ ಬಗ್ಗೆ ಚಾಸಾ.1 ರವರು 6 ಮತ್ತು 7 ನೇ ಆರೋಪಿಗೆ ಆಟೋ ಬಾಡಿಗೆ ನೀಡಲು ಬಾಕಿ ಉಳಿಸಿಕೊಂಡಿದ್ದು ಅದನ್ನು ಕೇಳಿದ ಬಾಬ್ತು ಚಾಸಾ.1 ರವರು ಆರೋಪಿಗಳ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಡಿಕೆಗೆ ಕೊಳೆ ರೋಗ ಬಂದಾಗ ಅಡಿಕೆ ಉದುರಿ ಬೀಳುತ್ತವೆ ಎಂದರೆ ಸರಿಯಲ್ಲ. ಚಾಸಾ.1 ರವರ ತೋಟದಲ್ಲಿ ಕಳ್ಳತನ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ 6 ಮತ್ತ 7 ನೇ ಆರೋಪಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಶ್ರೀ ಎಸ್.ಡಿ. ವಕೀಲರಿಂದ – 1 ರಿಂದ 4 ನೇ ಆರೋಪಿತನ ಪರವಾಗಿ</u>**

4. ನಾನು ಮತ್ತು ಚಾಸಾ.1 ರವರು ಸ್ನೇಹಿತರು ಎಂದರೆ ಸರಿಯಲ್ಲ. ಅಬ್ಬಾರಿ ಗ್ರಾಮಕ್ಕೂ ಅಣಜೂರು ಗ್ರಾಮಕ್ಕೂ ಸುಮಾರು 1 ಕಿ.ಮೀ ಅಂತರ ಇರುತ್ತದೆ. ನನಗೆ ಅಣಜೂರು ಗ್ರಾಮದಲ್ಲಿ ತೋಟ ಇರುವುದಿಲ್ಲ, ಆದರೆ ಅಬ್ಬಾರಿ ಗ್ರಾಮದಲ್ಲಿ ತೋಟ ಇರುತ್ತದೆ. ದಿಃ 24.12.2021 ಮತ್ತು ದಿಃ 30.12.2021 ರಂದು ಅಡಿಕೆ ಕಳ್ಳತನ ಆಗಿರುವ ಬಗ್ಗೆ ನನಗೆ ಚಾಸಾ.1 ರವರು ತಿಳಿಸಿರುತ್ತಾರೆ. ಚಾಸಾ.1 ರವರ ಬಳಿ ಅಡಿಕೆ ಕಳ್ಳತನ ಆಗಿರುವ ಬಗ್ಗೆ ಪೊಲೀಸ್ ಠಾಣೆಗೆ ದೂರು ಕೊಡೋಣ ಎಂದು ನಾನು ತಿಳಿಸಿರುತ್ತೇನೆ. ಚಾಸಾ.1 ರವರ ಜೊತೆ ದೂರು ಕೊಡುವ ಸಮಯದಲ್ಲಿ ನಾನು

ಹೋಗಿರುವುದಿಲ್ಲ. ಆದರೆ ಚಾಸಾ.1 ರವರು ದೂರು ನೀಡಲು ಹೋದಾಗ ನನಗೆ ತಿಳಿಸಿ ಹೋಗಿರುತ್ತಾರೆ. ಚಾಸಾ.1 ರವರು ದೂರು ನೀಡಿದ ನಂತರ ಪೊಲೀಸರು ನನ್ನನ್ನು ಠಾಣೆಗೆ ಕರೆಸಿರುತ್ತಾರೆ. ಠಾಣೆಯಲ್ಲಿ ಪೊಲೀಸರು ನನ್ನ ಯಾವುದೇ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ನಿ.ಪಿ.2 ರಲ್ಲಿ ಇರುವ ಸಹಿಯನ್ನು ನಾನು ಚಾಸಾ.1 ರವರ ತೋಟದಲ್ಲಿ ಹಾಕಿರುತ್ತೇನೆ. ಯಾವ ಸರ್ವೆ ನಂಬರ್ ನಲ್ಲಿ ಮಹಜರ್ ಮಾಡಿರುತ್ತಾರೆ ಎಂದು ನಿ.ಪಿ.2 ರಲ್ಲಿ ನಮೂದು ಮಾಡಿರುತ್ತದೆ ಎಂದು ನಾನು ನೋಡಿರುವುದಿಲ್ಲ. ಮಹಜರ್ ಮಾಡುವ ಸಮಯದಲ್ಲಿ ಪೊಲೀಸರು ನನಗೆ ಮಹಜರ್ ಸ್ಥಳದ ಸರ್ವೆ ನಂಬರ್ ನನಗೆ ಹೇಳಿರುವುದಿಲ್ಲ. ನಿ.ಪಿ.2 ರಲ್ಲಿ ಉತ್ತರ ಮತ್ತು ದಿಕ್ಷಿಣ ದಿಕ್ಕಿಗೆ ಯಾರು ಜಮೀನು ಎಂದು ನಮೂದು ಮಾಡಿರುತ್ತದೆ ಎಂದು ನಾನು ನೋಡಿರುವುದಿಲ್ಲ. ಯಾವ ದಿನಾಂಕದಂದು ಕಳ್ಳತನ ಆಗಿರುತ್ತದೆ ಎಂದು ಮಹಜರ್ ನಲ್ಲಿ ಬರೆದಿರುತ್ತಾರೆ ಎಂದು ನಾನು ನೋಡಿರುವುದಿಲ್ಲ. ನಾನು ಮತ್ತು ಚಾಸಾ.1 ರವರು ನಿ.ಪಿ.2 ಮಹಜರ್ ಗೆ 11.00 ಗಂಟೆಗೆ ಸಹಿ ಹಾಕಿರುತ್ತೇವೆ. ನಿ.ಪಿ.2 ಮಹಜರ್ ನಲ್ಲಿ ನಿಖರವಾಗಿ ಏನೇನು ಬರವಣಿಗೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆದರೆ ಅಡಿಕೆ ಕಳ್ಳತನ ಆಗಿರುತ್ತದೆ ಎಂದು ಬರವಣಿಗೆ ಮಾಡಿರುತ್ತಾರೆ. 1 ರಿಂದ 4 ನೇ ಆರೋಪಿಗಳು ಕೂಲಿ ಕೆಲಸ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ರಿಂದ 4 ನೇ ಆರೋಪಿಗಳು ನನ್ನ ತೋಟಕ್ಕೂ ಕೆಲಸಕ್ಕೆ ಬಂದಿರುತ್ತಾರೆ ಎಂದರೆ ಸರಿಯಲ್ಲ. 1 ರಿಂದ 4 ನೇ ಆರೋಪಿಗಳು ನನ್ನ ತೋಟಕ್ಕೆ ಕೆಲಸಕ್ಕೆ ಬಂದಿದ್ದರು ಸಹ ಅವರಿಗೆ ನಾನು ಸರಿಯಾದ ಸಂಬಳ ನೀಡದ ಬಗ್ಗೆ ಸದರಿ ಆರೋಪಿಗಳು ನನ್ನ ಬಳಿ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಆರೋಪಿಗಳಿಗೆ ಸಂಬಳ ನೀಡುವುದಿಲ್ಲ ಏನು ಮಾಡುತ್ತೀರಾ ಎಂದು ನಾನು ಕೇಳಿರುತ್ತೇನೆ ಎಂದರೆ ಸರಿಯಲ್ಲ. 1 ರಿಂದ 4 ನೇ ಆರೋಪಿಗಳು ಕಾರ್ಮಿಕ

ನ್ಯಾಯಾಲಯದಲ್ಲಿ ನನ್ನ ವಿರುದ್ದ ದೂರು ಸಲ್ಲಿಸುತ್ತಾರೆ ಎನ್ನುವ ಉದ್ದೇಶದಿಂದ ನಾನು ಚಾಸಾ.1 ರವರ ಜೊತೆ ಸೇರಿ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ತಕ್ಷೀರು ಸ್ಥಳಕ್ಕೆ ಹೋಗದೇ ಇದ್ದರು ಸಹ ಮತ್ತು ತಕ್ಷೀರು ಸ್ಥಳದಲ್ಲಿ ಯಾವುದೇ ಮಹಜರ್ ನ್ನು ಬರೆಯದೇ ಇದ್ದರು ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.2 ಮತ್ತು 3 ದಾಖಲೆಗೆ ನಾನು ಗೋಣಿಬೀಡು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಪಿ.ಕೆ. ವಕೀಲರಿಂದ – 5 ನೇ ಆರೋಪಿ ಪರವಾಗಿ**

5. 1 ರಿಂದ 4, 6 ಮತ್ತು 7 ನೇ ಆರೋಪಿತರ ಮಾಡಲಾದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆ:** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ